ಏ) ರಾಜ್ಯದಲ್ಲಿ ಒಟ್ಟು 96.87 ಲಕ್ಷ ಬಿಪಿಎಲ್ ಮತ್ತು ಎಎವೈ ಕುಟುಂಬಗಳಿದ್ದು, ಇದರಲ್ಲಿ ಕೇಂದ್ರ ಸರ್ಕಾರವು 8636 ಮೆ.ಟನ್. ಸಕ್ಕರೆಯನ್ನು ಮಾಹೆಯಾನ ಬಿಡುಗಡೆ ಮಾಡುತ್ತಿದೆ. ಸದರಿ ಪ್ರಮಾಣಕ್ಕೆ ರಾಜ್ಯ ಸರ್ಕಾರವು ಪ್ರಾಸಂಗಿಕ ವೆಚ್ಚಗಳಾಗಿ (Incidental Charges) ಪ್ರತಿ ಕ್ವಿಂಟಾಲ್‌ಗೆ ಸಗಟು ಲಾಭಾಂಶ ₹ 29.22, ಚಿಲ್ಲರೆ ಲಾಭಾಂಶ ₹ 36.00 ಹಾಗೂ ಅಂದಾಜು ಸಾಗಾಣಿಕೆ ವೆಚ್ಚ ₹ 100.00 ಒಟ್ಟು ₹ 165.22/- ರಂತೆ ಮಾಹೆಯಾನ ಒಟ್ಟು ₹ 143 ಕೋಟಿ ಭರಿಸಬೇಕಾಗುತ್ತದೆ.

ಉಳಿದ 10.51 ಲಕ್ಷ ಬಿಪಿಎಲ್ (ಎಎವೈ ಸೇರಿ) ಕುಟುಂಬಗಳ ಪಡಿತರ ಚೀಟಿದಾರರಿಗೆ ಸಕ್ಕರೆಯನ್ನು ನೀಡಲು ₹ 3.54 ಕೋಟಿ ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ.

ಒಟ್ಟಾರೆ ಮಾಹೆಯಾನ ₹ 4.97 ಕೋಟಿಗಳನ್ನು ರಾಜ್ಯ ಸರ್ಕಾರವು ಭರಿಸಬೇಕಾಗುತ್ತದೆ.

ಅನ್ನ ಭಾಗ್ಯ ಯೋಜನೆಗೆ ಅಕ್ಕಿ ಖರೀದಿ

488(304); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಗೆ ಪ್ರತಿ ತಿಂಗಳು ಬೇಕಾಗುವ ಅಕ್ಕಿಯ ಪ್ರಮಾಣವೆಷ್ಟು;

ಆ) ಈ ಅಕ್ಕಿಯನ್ನು ಹೊರ ರಾಜ್ಯಗಳಿಂದ ಹಾಗೂ ಸ್ಥಳೀಯವಾಗಿ ಖರೀದಿಸಲಾಗುತ್ತಿದೆಯೇ,

ಇ) ಯಾವ ದರದಲ್ಲಿ ಯಾವ ಯಾವ ರಾಜ್ಯಗಳಿಂದ ಖರೀದಿಸಲಾಗುತ್ತಿದೆ;

ಈ) ಇದಕ್ಕಾಗಿ ಖರ್ಚಾಗುತ್ತಿರುವ ಹಣವೆಷ್ಟು;

ಉ) ಹೊರ ರಾಜ್ಯಗಳಿಂದ ಹೆಚ್ಚಿನ ದರಕ್ಕೆ ಖರೀದಿಸುವ ಬದಲಾಗಿ ಸ್ಥಳೀಯವಾಗಿ ಕಡಿಮೆ ದರಕ್ಕೆ ಖರೀದಿಸಲು ಕ್ರಮಕೈಗೊಳ್ಳದೆ ಇರಲು ಕಾರಣಗಳೇನು?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ "ಅನ್ನಭಾಗ್ಯ" ಯೋಜನೆಗೆ ಪ್ರತಿ ತಿಂಗಳು ಅಂದಾಜು 2,41,881 ಮೆ.ಟನ್. ಅಕ್ಕಿ ಅವಶ್ಯಕತೆ ಇರುತ್ತದೆ.

ಆ) ಹೌದು.

ಇ) ಛತ್ತೀಸ್‌ಘಡ್ ರಾಜ್ಯದಿಂದ ಇಲ್ಲಿಯವರೆಗೆ 1,20,232 ಮೆ.ಟನ್. ಅಕ್ಕಿಯನ್ನು ಪ್ರತಿ ಕ್ವಿಂಟಾಲ್‌ಗೆ ₹ 2290 ರ ದರದಲ್ಲಿ ಖರೀದಿಸಲಾಗಿದೆ (ಸಾಗಾಣಿಕೆ ವೆಚ್ಚ ಹೊರತುಪಡಿಸಿ) ಹಾಗೂ ಸ್ಥಳಿಯವಾಗಿ NCDEX ಮೂಲಕ 66,192 ಮೆ.ಟನ್ ಅಕ್ಕಿಯನ್ನು ಕೆ.ಜಿ.ಗೆ ಸರಾಸರಿ ₹ 25/- ರಂತೆ ಖರೀದಿಸಲಾಗಿದೆ.

ಈ) ಇಲ್ಲಿಯವರೆಗೆ ಇದಕ್ಕಾಗಿ ₹. 249 ಕೋಟಿ. ಹಣವನ್ನು ಪಾವತಿಸಲಾಗಿದೆ.

ಉ) "ಅನ್ನಭಾಗ್ಯ" ಯೋಜನೆಯನ್ನು ಜುಲೈ ಮಾಹೆಯಲ್ಲಿ ಜಾರಿಗೊಳಿಸಿದಾಗ ತ್ವರಿತವಾಗಿ ಹೆಚ್ಚುವರಿ ಆಹಾರಧಾನ್ಯದ ಅವಶ್ಯಕತೆ ಇದ್ದಿತು. ಆ ಸಂದರ್ಭದಲ್ಲಿ ಛತ್ತೀಸ್‌ಘಡ್ ರಾಜ್ಯದ ಆಹಾರ ನಿಗಮದಲ್ಲಿ ಹೆಚ್ಚುವರಿ ಅಕ್ಕಿ ದಾಸ್ತಾನು ಇದ್ದುದರಿಂದ ಆ ರಾಜ್ಯದ ನಿಗಮದೊಂದಿಗೆ ಒಪ್ಪಂದ ಮಾಡಿಕೊಂಡು ಆಹಾರಧಾನ್ಯವನ್ನು ಖರೀದಿಸಲಾಗಿದೆ. ಆಗಸ್ಟ್ 2013ರ ಮಾಹೆಯಿಂದ NCDEX ಮೂಲಕ ಆನ್‌ಲೈನ್ ಟೆಂಡರಿನಲ್ಲಿ ರಾಜ್ಯದ ಅಕ್ಕಿ ವ್ಯಾಪಾರಿಗಳಿಂದ ಅಕ್ಕಿ ಖರೀದಿಸುವ ಪ್ರಕ್ರಿಯೆ ಪ್ರರಂಭಿಸಲಾಗಿದೆ ಹಾಗೂ ಡಿಸೆಂಬರ್ 2013ರ ಮಾಹೆಯಿಂದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತವನ್ನು ಮತ್ತು ಲಘ ಆದೇಶದನ್ವಯ ಅಕ್ಕಿಯನ್ನು ಸಂಗ್ರಹಿಸಿ "ಅನ್ನಭಾಗ್ಯ" ಯೋಜನೆಗೆ ಉಪಯೋಗಿಸಿಕೊಳ್ಳಲಾಗುವುದು.